ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 453
ಸದಸ್ಯರ ಹೆಸರು	: ಡಾ॥ ವೈ.ಎ. ನಾರಾಯಣಸ್ವಾಮಿ
ಉತ್ತರಿಸುವ ಸಚಿವರು	: ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	: 06-03-2020

ಕ್ರ.ಸ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ನಗರದಲ್ಲಿ ಬಸ್ ಸಂಚಾರಕ್ಕೆ ನಿರ್ಮಿಸಲಾಗುತ್ತಿರುವ ಪ್ರತ್ಯೇಕ ಪಥ ಯಶಸ್ವಿಯಾಗಿದೆಯೇ; ಹಾಗಿದ್ದಲ್ಲಿ ವಿವರ ನೀಡುವುದು;	ಬೆಂಗಳೂರು ನಗರದ ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಟಿನ್ ಫ್ಯಾಕ್ಟರಿಯವರೆಗೆ **'ಬಸ್ ಆದ್ಯತಾ ಪಥವನ್ನು'** ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ವಿವರಗಳು ಈ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕ)
ಆ)	ರಾಜ್ಯದ ಇತರೆ ನಗರಗಳಲ್ಲಿಯೂ ಇಂತಹ ಪಥ ಮೀಸಲಿಡುವ ಪ್ರಸ್ತಾಪವಿದೆಯೇ; ಹಾಗಿದಲ್ಲಿ, ಅದರ ವಿವರ ನೀಡುವುದು?	ಬೆಂಗಳೂರು ನಗರದ ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸುವ ಹಿನ್ನಲೆಯಲ್ಲಿ ಹೆಚ್ಚಿನ ಸಂಚಾರ ದಟ್ಟಣೆಯ 12 ಕಾರಿಡಾರ್‌ಗಳಲ್ಲಿ ಬಸ್ ಆದ್ಯತಾ ಫಥವನ್ನು 2ನೇ ಹಂತದಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ಹುಬ್ಬಳ್ಳಿ-ಧಾರವಾಡ ಮಧ್ಯೆ ಪ್ರತ್ಯೇಕ ಪಥ ನಿರ್ಮಿಸಿ ಬಿ.ಆರ್.ಟಿ.ಎಸ್. ಚಿಗರಿ ವಾಹನಗಳನ್ನು ಯಶಸ್ವಿಯಾಗಿ ಕಾರ್ಯಾಚರಿಸಲಾಗುತ್ತಿದೆ. ಉಳಿದಂತೆ ಇನ್ನಿತರ ನಗರಗಳಲ್ಲಿ ಇಂತಹ ಪಥ ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ.

ಬಸ್ ಆದ್ಯತಾ ಪಥದ ಅನುಷ್ಠಾನದ ಹಿಂದಿನ, ನಂತರದ ಮತ್ತು ವ್ಯತ್ಯಾಸದ ವಿವರ

ಅಂಶಗಳು	ಹಿಂದಿನ	ನಂತರ	ವ್ಯತ್ಯಾಸ
ಕಾರ್ಯಾಚರಣೆಯಲ್ಲಿರುವ ಅನುಸೂಚಿಗಳ ಸಂಖ್ಯೆ	837	837	00
ಸರಾಸರಿ ದೈನಂದಿನ ಸಾರಿಗೆ ಆದಾಯ (ರೂ. ಗಳಲ್ಲಿ)	61,70,012/-	62,50,249/-	80,237/-
ಸರಾಸರಿ ದೈನಂದಿನ ಪ್ರಯಾಣಿಕರ ಸಂಖ್ಯೆ	88619	93345	3727
ಪ್ರಯಾಣದ ಸಮಯ	1:20:56	1:06:21	0:14:35

ಸಂಖ್ಯೆ: ಟಿಡಿ 43 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು